5230(6165) ಶ್ರೀ ಎಸ್.ಅಂಗಾರ (ಸುಳ್ಯ) ಮಾನ್ಯ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಕರ್ನಾಟಕ ಅರಣ್ಯ ಅಭಿವೃದ್ಧಿ ನಿಗಮ ನಿಯಮಿತದಲ್ಲಿ ಅವ್ಯವಹಾರ ನಡೆಸಿರುವ ತಪ್ಪಿತಸ್ಥರ ವಿರುದ್ಧ ಸರ್ಕಾರ ತೆಗೆದುಕೊಂಡ ಕ್ರಮಗಳೇನು;

ಆ) ಈವರೆಗೂ ಇವರುಗಳ ವಿರುದ್ಧ ಸರ್ಕಾರ ಶಿಸ್ತಿನ ಕ್ರಮ ಕೈಗೊಳ್ಳದಿದ್ದಲ್ಲಿ ಅದಕ್ಕೆ ಕಾರಣಗಳೇನು;

ಇ) ಇವರುಗಳ ವಿರುದ್ಧ ಇಲಾಖಾ ವಿಚಾರಣೆಯನ್ನೇನಾದರೂ ನಡೆಸಲಾಗುತ್ತಿದೆಯೇ;

ಈ) ಹಾಗಿದ್ದಲ್ಲಿ ಈವರೆಗೂ ನಡೆದಿರುವ ವಿಚಾರಣೆಯ ವಿವರಗಳನ್ನು ಒದಗಿಸುವುದು?

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ(ಅರಣ್ಯ ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು) :

ಅ) ಕರ್ನಾಟಕ ಅರಣ್ಯ ಅಭಿವೃದ್ಧಿ ನಿಗಮದಲ್ಲಿ ಅವ್ಯವಹಾರ ನಡೆಸಿದವರ ವಿರುದ್ಧ ನಿಗಮ ಹಾಗೂ ಸರ್ಕಾರ ಸೂಕ್ತ ವಿಚಾರಣೆಯನ್ನು ಕೈಗೊಂಡಿರುತ್ತದೆ. ವಿವರ ಈ ಕೆಳಗಿನಂತಿದೆ:

1) ಶ್ರೀ ಹೆಚ್.ಪಿ. ಲಕ್ಷ್ಮಿನಾರಾಯಣ, ಸಹಾಯಕ ವಿಭಾಗೀಯ ವ್ಯವಸ್ಥಾಪಕರು, ಇವರ ಕರ್ತವ್ಯ ಲೋಪದಿಂದ ಆಗಿರುವ ಹಣದ ದುರುಪಯೋಗದ ಆರೋಪದ ವಿಚಾರಣೆಯನ್ನು ನಡೆಸಲು ನಿಗಮದ ಪತ್ರ ಸಂ. ಕಅಅನಿ:ಎಅರಣ್ಯ ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ : ಎ1:ಇಎನ್‌ಕ್ಯೂ : 2001–02:2178, ದಿನಾಂಕ. 10/3/2003 ಶ್ರೀ ಡಿ.ಎಸ್. ಗಾಂವಕರ್, ಉಪ ಅರಣ್ಯ ಸಂರಕ್ಷಣಾಧಿಕಾರಿ, ಇವರನ್ನು ವಿಚಾರಣಾಧಿಕಾರಿಯನ್ನಾಗಿ ಮತ್ತು ಶ್ರೀ ಟಿ.ನಾಗರಾಜ ನಾಯ್ಡು, ಸಹಕಾರ ವಿಭಾಗೀಯ ವ್ಯವಸ್ಥಾಪಕರನ್ನು ದಂಡನಾಧಿಕಾರಿಯನ್ನಾಗಿ ನೇಮಕ ಮಾಡಲಾಗಿದೆ. ಈ ವಿಚಾರಣೆಗೆ ಕರ್ನಾಟಕ ಉಚ್ಚ ನ್ಯಾಯಾಲಯದಿಂದ ತಡೆಯಾಜ್ಞೆ ಬಂದಿತ್ತು. ಸದರಿ ತಡೆಯಾಜ್ಞೆಯನ್ನು ತೆರವು ಮಾಡಲಾಗಿದೆ. ಪುನಃ ವಿಚಾರಣೆಯನ್ನು ವಿಚಾರಣಾಧಿಕಾರಿಗಳು ಮುಂದುವರಿಸಿರುತ್ತಾರೆ.

2) ಶ್ರೀ ಜಿ.ಎಂ.ಶ್ರೀನಿವಾಸ, ಅಧೀಕ್ಷಕರು, ಇವರು ಮೇಲಿನ ಹಣದ ದುರುಪಯೋಗ ಆರೋಪದ ಬಗ್ಗೆ ವಿಚಾರಣೆ ನಡೆಸಲು ಪತ್ರ ಸಂ. ಕಅಅನಿ:1:ಸಿಬ್ಬಂದಿ: ಇತರೆ:05–06:264. ದಿನಾಂಕ. 2/5/2005 ರಂತೆ ಶ್ರೀ ಎಂ.ಎಸ್.ನರಸಿಂಹಮೂರ್ತಿ, ನಿವೃತ್ತ ಜಿಲ್ಲಾ ನ್ಯಾಯಾಧೀಶರನ್ನು ವಿಚಾರಣಾಧಿಕಾರಿಯನ್ನಾಗಿ ನೇಮಿಸಿದ್ದು, ಮಂಡನಾಧಿಕಾರಿಯನ್ನಾಗಿ ಶ್ರೀ ಟಿ.ನಾಗರಾಜು ನಾಯ್ಡು, ಸಹಾಯಕ ವಿಭಾಗೀಯ ವ್ಯವಸ್ಥಾಪಕರನ್ನು ನೇಮಿಸಲಾಗಿದೆ.

3) ಶ್ರೀ ಎಂ.ವಿ.ಮೂಲಿಮನಿ, ಭಾಅಸೇ (ನಿವೃತ್ತ) ಇವರ ವಿರುದ್ಧದ ಆಪಾದನೆಯ ಬಗ್ಗೆ ಸರ್ಕಾರವು ವಿಚಾರಣೆಯನ್ನು ನಡೆಸುವ ಬಗ್ಗೆ ಪರಿಶೀಲಿಸುತ್ತದೆ. ಸದರಿ ಅಧಿಕಾರಿಯವರ ನಿವೃತ್ತಿ ವೇತನ ಸೌಲಭ್ಯಗಳನ್ನು ತಡೆ ಹಿಡಿಯಲಾಗಿದೆ.

ಆ) ವಿಚಾರಣೆಯು ಇನ್ನು ಪೂರ್ಣಗೊಂಡಿಲ್ಲವಾದ್ದರಿಂದ ಈ ಹಂತದಲ್ಲಿ ಕ್ರಮಕೈಗೊಳ್ಳುವ ವಿಚಾರ ಉದ್ಭವಿಸುವುದಿಲ್ಲ.

ಇ) ವಿಚಾರಣೆಯನ್ನು ನಡೆಸುತ್ತಿದ್ದು, ವಿಚಾರಣಾ ವರದಿಯನ್ನು ನಿರೀಕ್ಷಿಸಲಾಗಿದೆ.

ಈ) ವಿಚಾರಣೆಯನ್ನು ನಡೆಸುತ್ತಿದ್ದು, ವಿಚಾರಣಾ ವರದಿಯನ್ನು ನಿರೀಕ್ಷಿಸಲಾಗಿದೆ.